ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ
ಚನ್ನಪಟ್ಟಣ

CC No.173/2017

CW -1 PW - 1

| | | |
|---|---|---|
| ಹೆಸರು | ಃ | ಕೆ ಎಂ ರತ್ನಮ್ಮ |
| ಗಂಡನ / ತಂದೆಯ ಹೆಸರು | ಃ | ಜಗದೀಶ್ ಬಿ |
| ವಯಸ್ಸು | ಃ | 38 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ | ಃ | ಬೇವೂರು |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ ದಿನಾಂಕ 29.11.2019

ಚಾಸಾ2 ನನ್ನ ಗಂಡ. ಆರೋಪಿಗಳು ನಮ್ಮ ಪಕ್ಕದ ಮನೆಯವರು. ಚಾಸಾ -3 ಮತ್ತು 4 ಗೊತ್ತು. ದಿಃ07.11.2016 ರಲ್ಲಿ ಬೆಳಗ್ಗೆ 7.00 ಗಂಟೆಯ ಸಮಯದಲ್ಲಿ ಚಾಸಾ2 ರವರು ಹಾಲು ತೆಗೆದುಕೊಂಡು ಡೈರಿಗೆ ಹೋಗಿದ್ದರು ನಮ್ಮ ಮತ್ತು ಆರೋಪಿಗಳ ಮದ್ಯೆ ತಿರುಗಾಡಲು ಜಾಗವಿರುತ್ತದೆ ನಾನು ಆ ಜಾಗದಲ್ಲಿ ಹಸುಗಳನ್ನು ಕಟ್ಟಿಹಾಕಲು ಹೋಗುತ್ತಿದ್ದಾಗ , 2 ಮತ್ತು 3 ನೇ ಆರೋಪಿಗಳು ಇಲ್ಲಿ ತಿರುಗಾಡಬೇಡ ಎಂದು ನನಗೆ ಅಸಭ್ಯ ಪದಗಳಿಂದ ಅಂದರೆ ನಿಮ್ಮ ಗಂಡ ಅಥವಾ ಅಪ್ಪನದ ಜಾಗ ಇದು ಎಂದು ಬೈದಿರುತ್ತಾರೆ. 2 ಮತ್ತು 3 ನೇ ಆರೋಪಿಗಳು ನನ್ನ ಮುಂದಲೆಯನ್ನು ಹಿಡಿದು ಅವರ ಮನೆಯ ಒಳಗೆ

ಎಳೆದುಕೊಂಡು ಹೋಗಿ 3 ನೇ ಆರೋಪಿ 1 ನೇ ಆರೋಪಿಗೆ ದೊಣ್ಣೆ ಮತ್ತು ನಲ್ಲಿ ಪೈಪುಗಳನ್ನು ಕೊಟ್ಟಿದ್ದು 1 ನೇ ಆರೋಪಿ ನನಗೆ ಪೈಪು ಮತ್ತು ದೊಣ್ಣೆಯಿಂದ ಹೊಡೆದಿರುತ್ತಾರೆ. ಫಲಾಟೆಯ ವಿಚಾರ ತಿಳಿದು ಚಾಸಾ2 ರವರು ಸ್ಥಳಕ್ಕೆ ಬಂದಾಗ ಚಾಸಾ2 ರವರಿಗೆ 1 ನೇ ಆರೋಪಿ ಪೈಪಿನಿಂದ ಬಲಗೈ ಮತ್ತು ಎಡಗಾಲಿಗೆ ಹೊಡೆದಿರುತ್ತಾನೆ, ಬಲಕೆನ್ನೆಗೆ ಕಚ್ಚಿರುತ್ತಾನೆ. ಚಾಸಾ3 ರವರು ಜಗಳವನ್ನು ಬಿಡಿಸಿರುತ್ತಾರೆ. ನಂತರ ಚಾಸಾ2 ರವರನ್ನು ಆಸ್ಪತ್ರೆಗೆ ದಾಖಲು ಮಾಡಿ ನಂತರ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಈಗ ತೋರಿಸುತ್ತಿರುವ ದೂರನ್ನು ನೋಡುತ್ತಿದ್ದು ಅದನ್ನು ನಿಪಿ-1 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಆರೋಪಿಗಳು ಹೊಡೆಯಲು ಉಪಯೋಗಿಸಿದ ಪೈಪು ಮತ್ತು ದೊಣ್ಣೆಯನ್ನು ಈಗ ನ್ಯಾಯಾಲಯದ ಮುಂದೆ ಇದ್ದು, ಅವುಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಮು ಮಾ 1 ಮತ್ತು 2 ಎಂದು ಗುರುತಿಸಲಾಯಿತು.

ದೂರು ನೀಡಿದ 2-3 ದಿನದ ನಂತರ ಪೋಲಿಸರು ಸ್ಥಳಕ್ಕೆ ಬೇಟಿ ನೀಡಿ ನಿಪಿ-2 ರಂತೆ ಮಹಜರನ್ನು ತಯಾರಿಸಿರುತ್ತಾರೆ ನಿಪಿ-2 (ಎ) ನನ್ನ ಸಹಿಯಾಗಿರುತ್ತದೆ. ನ್ಯಾಯಾಲಯದ ಮುಂದೆ ಇರುವ ಆರೋಪಿಗಳೇ ಆ ದಿನ ನಮ್ಮನ್ನು ಹೊಡೆದಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಅನುಮತಿಸಲಾಯಿತು).

<u>ಪಾಟೀ ಸವಾಲು : ಎಪಿಪಿ ಯವರಿಂದ :</u>

ಈ ಜಾಗದಲ್ಲಿ ತಿರುಗಾಡಿದರೆ ನಿಮ್ಮನ್ನು ಕೊಲೆ ಮಾಡುವುದಾಗಿ ಪ್ರಾಣ ಬೆದರಿಕೆ ಹಾಕಿರುತ್ತಾರೆಂದರೆ ಸರಿ . ನಿಪಿ-2 ನ್ನು ತಯಾರಿಸುವ ಕಾಲದಲ್ಲಿಯೇ ಮು ಮಾ 1 ಮತ್ತು 2 ನ್ನು ಅಮಾನತ್ತು ಪಡಿಸಿದ್ದರು ಎಂದರೆ ಸರಿಯಲ್ಲ.

<u>ಪಾಟೀ ಸವಾಲು : ಆರೋಪಿಗಳ ಪರ ಶ್ರೀ ಎಂ ಕೆ ಎನ್ ವಕೀಲರಿಂದಃ</u>

ನಮ್ಮ ಮನೆಯ ಅಕ್ಕ ಪಕ್ಕ ವಾಸದ ಮನೆಗಳು ಇವೆ ಎಂದರೆ ಸರಿ. ನಮ್ಮ ಮತ್ತು ಆರೋಪಿಗಳ ನಡುವೆ ಇರುವ ಸೊಂಪಿನ ಬಗ್ಗೆ ಸಿವಿಲ್ ವ್ಯಾಜ್ಯ ಇದೆ ಎಂದು ಈ ಘಟನೆಯ ಹಿಂದೆ ಇರಲಿಲ್ಲ ನಂತರ ದಾಖಲಾಗಿದೆ. ಸದರಿ ಸೊಂಪನ್ನು ಆರೋಪಿಗಳು ಉಪಯೋಗಿಸುತ್ತಿದ್ದರು ಎಂದರೆ ನಾವು ಉಪಯೋಗಿಸುತ್ತಿದ್ದೆವು. ಸದರಿ ಸೊಂಪನ್ನು ನಾವು ಕೊಡಬೇಕು ಎಂದು ಕೇಳುತ್ತಿದ್ದೆವು ಎಂದರೆ ನಾವು ಸಹ ಅದನ್ನು ಉಪಯೋಗಿಸುತ್ತಿದ್ದೆವು. ಸೊಂಪು ಇರುವ ಜಾಗದ ಖಾತೆ 3 ನೇ ಆರೋಪಿಯ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಈಗ

3 ನೇ ಆರೋಪಿ ಸೊಂಪಿನ ವಿಚಾರವಾಗಿ ಖಾತೆಯನ್ನು ಹಾಜರು ಪಡಿ ನಮ್ಮ ವಿರುದ್ದ ತಾತ್ಕಾಲಿಕ ತಡೆ ಆಜ್ಞೆಯನ್ನು ಪಡೆದಿದ್ದಾರೆಂದರೆ ಸರಿ. ನಮ್ಮ ಮನೆಯಿಂದ ನಾವು ಕಟ್ಟಿಸಿದ ಹೊಸ ಮನೆಗೆ ಹೋಗಲು ನಮ್ಮ ಮನೆಯ ಹಿಂಭಾಗದಿಂದ ಹೋಗಬಹುದು ಎಂದರೆ ನಾವು ಹೋಗಬಹುದು ಆದರೆ ಹಸುಗಳನ್ನು ಕರೆದುಕೊಂಡು ಹೋಗಲು ಆಗುವುದಿಲ್ಲ.

ಗಲಾಟೆ ಸುಮಾರು 1 ವರೆ ಗಂಟೆಗಳ ಕಾಲ ನಡೆಯಿತು. ಗಲಾಟೆಯಾಗುವಾಗ ಸುಮಾರು 7-8 ಜನ ಬಂದಿದ್ದರು. ಅವರುಗಳು ಗೌರಮ್ಮ, ನೀಲಮ್ಮ, ಮಂಗಳಮ್ಮ, ದೇವಮ್ಮ, ಚಿಕ್ಕತಾಯಮ್ಮ ಮತ್ತು ಇತರರು ಬಂದಿದ್ದರು. ನನಗೆ ನೋವು ಆಗಿದ್ದ ಬಗ್ಗೆ ನಾನು ಚುಚ್ಚುಮದ್ದನ್ನು ತೆಗೆದುಕೊಂಡಿದ್ದೆ ಮತ್ತು ವೈದ್ಯರಿಗೆ ಗಲಾಟೆಯ ಬಗ್ಗೆ ಹೇಳಿದ್ದೆ. ಚಾಸಾ2 ರವರಿಗೆ ಪೈಪು ಮತ್ತು ದೊಣ್ಣೆಯಿಂದ ಹೊಡೆದಿದ್ದರಿಂದ ಅವರಿಗೆ ಕೆನ್ನೆಗೆ ಮತ್ತು ಕೈಗೆ ರಕ್ತಗಾಯ ಆಗಿತ್ತು. ಚಾಸಾ2 ರವರ ಬಟ್ಟೆಗೆ ರಕ್ತದ ಕಲೆಗಳು ಆಗಿತ್ತು. ಚಾಸಾ2 ರವನ್ನು ಕೆಳಕ್ಕೆ ಕೆಡವಿಕೊಂಡು ಹಲ್ಲೆ ಮಾಡಿದ ಬಗ್ಗೆ ನಾನು ದೂರಿನಲ್ಲಿ ಹೇಳಿಲ್ಲ. ಚಾಸಾ2 ರವರ ಹರಿದು ಹೋಗಿದ್ದ ಶರ್ಟನ್ನು ನಾನು ಪೋಲಿಸರಿಗೆ ಕೊಟ್ಟಿಲ್ಲ. ನಮ್ಮ ಊರಿನಿಂದ ಬರಬೇಕಾದರೆ ಎಂ ಕೆ ದೊಡ್ಡಿ ಪೋಲಿಸ್ ಠಾಣೆ ಸಿಗುತ್ತದೆ ಎಂದರೆ ಸರಿ. ಊರಿನಿಂದ ಬರಬೇಕಾದರೆ ನಾವು ಪೋಲಿಸ್ ಠಾಣೆಗೆ ಹೋಗಿ ದೂರನ್ನು ನೀಡಿಲ್ಲ. ನಿಪಿ-1 ನ್ನು ನಾನೇ

ಬರೆದಿರುತ್ತೇನೆ. ನನ್ನ ಗಂಡ ಆಸ್ಪತ್ರೆಯಲ್ಲಿರುವಾಗ ಪೋಲಿಸರು ಸ್ಥ,ಳಕ್ಕೆ ಬಂದು ಮು ಮಾ 1 ಮತ್ತು 2 ನ್ನು ಅಮಾನತ್ತು ಪಡಿಸಿದರು. ನನ್ನ ಸಹಿ ಇರುವ ಚೀಟಿಯನ್ನು ಮು ಮಾ 1 ಮತ್ತು 2 ಕ್ಕೆ ಅಂಟಿಸಿದರೋ , ಇಲ್ಲವೋ ಎಂದು ನನಗೆ ಈಗ ಹೇಳಲು ನೆನಪಿಲ್ಲ . ಮು ಮಾ 1 ಮತ್ತು 2 ನ್ನು ಅಮಾನತ್ತು ಪಡಿಸುವಾಗ ಪೋಲಿಸರು ಬರವಣಿಗೆ ಮಾಡಿದ್ದರು ಆದರೆ ಅದರಲ್ಲಿ ಏನು ಬರೆದಿದೆ ಎಂದು ಈಗ ಹೇಳಲು ಆಗುವುದಿಲ್ಲ. ಸಾಮಾನ್ಯವಾಗಿ ಮು ಮಾ 2 ರಂತಹ ವಸ್ತುಗಳು ಹಳ್ಳಿಯಲ್ಲಿ ಸಿಗುತ್ತದೆ ಎಂದರೆ ಸರಿ. ಈ ಪ್ರಕರಣವನ್ನು ಬಲಪಡಿಸಲು ಮು ಮಾ 1 ಮತ್ತು 2 ನ್ನು ನಾನೇ ಈ ಸೃಷ್ಟಿ ಮಾಡಿಪೋಲಿಸರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹಿಂದಿನಿಂದ ನಮ್ಮ ಮತ್ತು ಆರೋಪಿಗಳ ಮದ್ಯೆ ಜಮೀನಿನ ವಿಚಾರದಲ್ಲಿ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. ನನ್ನ ಗಂಡ ಬಿದ್ದು ಏಟು ಮಾಡಿಕೊಂಡಿದ್ದನ್ನು ಉಪಯೋಗಿಸಿ ನಾವು ಆರೋಪಿಗಳ ವಿರುದ್ದ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಅವಾಚ್ಯ ಶಬ್ದದಿಂದ ಬೈದಿಲ್ಲ ಮತ್ತು ಹಲ್ಲೆ ಮಾಡಿ ಕಚ್ಚಿಲ್ಲ ಹಾಗೂ ಪ್ರಾಣಬೆದರಿಕೆ ಹಾಕಿಲ್ಲ ಹಾಗೂ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಚನ್ನಪಟ್ಟಣ